**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ**

**ವಿಶೇಷ ಮೊಕದ್ದಮೆ ಸಂಖ್ಯೆಃ- 816/2021**

**ಪ್ರಾಸಾಃ- 39 ಚಾಸಾಃ- 54**

| | |
|---|---|
| ಸಾಕ್ಷಿಯ ಹೆಸರು | : ರಮೇಶ್ ಕುಮಾರ್ ಹೆಚ್.ಬಿ |
| ತಂದೆಯ ಹೆಸರು | : ಬೈರಪ್ಪ |
| ವಯಸ್ಸು | : 54 ವರ್ಷ |
| ವೃತ್ತಿ | : ಎ ಸಿ ಪಿ, ಕೆ ಆರ್ ಉಪವಿಭಾಗ, ಮೈಸೂರು ನಗರ |
| ವಾಸಸ್ಥಳ | : ಮೈಸೂರು |
| ಸಾಕ್ಷಿಯ ಹೆಸರು | : ರಮೇಶ್ ಕುಮಾರ್ ಹೆಚ್.ಬಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 30.1.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನಾನು ದಿನಾಂಕ;04.09.2020 ರಿಂದ 03.07.2022 ರವರೆಗೆ ಬಳ್ಳಾರಿ ನಗರ ಉಪ ವಿಭಾಗದ ಡಿಎಸ್‌ಪಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ:03.08.2021 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಮಾನ್ಯ ಎಸ್‌ಪಿ, ಬಳ್ಳಾರಿ ರವರ **ಆದೇಶದಂತೆ ಸಿಡಬ್ಲ್ಯೂ-53** ರವರಿಂದ ವಹಿಸಿಕೊಂಡು ಪರಿಶೀಲಿಸಿರುತ್ತೇನೆ. ಸದರಿ ಆದೇಶವನ್ನು ನಿಪಿ-153 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-153(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ **ಸಿಡಬ್ಲ್ಯೂ**-1 ಶ್ರಾವಣಿ ರವರನ್ನು ವಿಚಾರಣೆ ಮಾಡಿ ಮರುಹೇಳಿಕೆ ಮತ್ತು **ಸಿಡಬ್ಲ್ಯೂ**-1 ರವರ ಗಂಡ **ಸಿಡಬ್ಲ್ಯೂ**-15 ಅನೂಪ್‌ಕುಮಾರ್ ರವರ ಹೇಳಿಕೆ ಹಾಗೂ **ಸಿಡಬ್ಲ್ಯೂ**-16 ರುದ್ರಪ್ಪ, **ಸಿಡಬ್ಲ್ಯೂ**-17 ಬಿ. ಹನುಂಮಂತಪ್ಪ, **ಸಿಡಬ್ಲ್ಯೂ**-18 ಇಸ್ಮಾಯಿಲ್, **ಸಿಡಬ್ಲ್ಯೂ**-19 ಸಮೀವುಲ್ಲಾ, **ಸಿಡಬ್ಲ್ಯೂ**-20 ಹುಲುಗಪ್ಪ, **ಸಿಡಬ್ಲ್ಯೂ**-21 ವೆಂಕಟೇಶ್, **ಸಿಡಬ್ಲ್ಯೂ**-22 ಕುಮಾರ್, **ಸಿಡಬ್ಲ್ಯೂ**-23 ದಾವಲ್‌ಸಾಬ್, **ಸಿಡಬ್ಲ್ಯೂ**-24 ಅಂಬರೇಶ, **ಸಿಡಬ್ಲ್ಯೂ**-25 ಮಹದೇವಗೌಡ, **ಸಿಡಬ್ಲ್ಯೂ**-26 ರಮೇಶ್ ರವರನ್ನು ವಿಚಾರಣೆ ಮಾಡಿ ಸದರಿಯವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ. ಸಾಕ್ಷಿದಾರರು ಹೇಳಿಕೆ ನೀಡುವ ಸಮಯದಲ್ಲಿ ವೀಡಿಯೊ ಕ್ಯಾಮರದಲ್ಲಿ ವೀಡಿಯೊ ಮಾಡಿಸಿದ್ದೆ. ಸಾಕ್ಷಿಯು ಸದರಿ ವೀಡಿಯೋ ಸಿಡಿಯನ್ನು ಪ್ಲೇ ಮಾಡಿ ತೋರಿಸಿದಾಗ ನೋಡಿ ಗುರುತಿಸಿದ್ದು ಅದನ್ನು ನಿಪಿ-154 ಎಂದು ಗುರುತಿಸಲಾಯಿತು.

-2-

ಸದರಿ ವೀಡಿಯೋ ಮಾಡಿದ ಪಿಸಿ-1050 **ಸಿಡಬ್ಲ್ಯೂ**-50 ರವರಿಂದ ಕಲಂ 65 ಬಿ ಪ್ರಮಾಣ ಪತ್ರ ಪಡೆದಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-112 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ-112(ಬಿ) ಎಂದು ಗುರುತಿಸಲಾಯಿತು. ಚಾಸಾ 1 ರವರು ನಿಪಿ-20 ರಂತೆ, ಚಾಸಾ 15 ರವರು ನಿಪಿ-53 ರಂತೆ, ಚಾಸಾ 16 ರವರು ನಿಪಿ-22 ರಂತೆ, ಚಾಸಾ 17 ರವರು ನಿಪಿ-25 ರಂತೆ, ಚಾಸಾ 18 ರವರು ನಿಪಿ-

27 ರಂತೆ, ಚಾಸಾ 19 ರವರು ನಿಪಿ-42 ರಂತೆ, ಚಾಸಾ 20 ರವರು ನಿಪಿ-29 ರಂತೆ, ಚಾಸಾ 21 ರವರು ನಿಪಿ-33 ರಂತೆ, ಚಾಸಾ 22 ರವರು ನಿಪಿ-36 ರಂತೆ, ಚಾಸಾ 23 ರವರು ನಿಪಿ-40 ರಂತೆ, ಚಾಸಾ 24 ರವರು ನಿಪಿ-49 ರಂತೆ, ಚಾಸಾ 26 ರವರು ನಿಪಿ-65 ರಂತೆ ನನ್ನ ಮುಂದೆ ಹೇಳಿಕೆಗಳನ್ನು ಕೊಟ್ಟಿರುತ್ತಾರೆ.

ಅದೇ ದಿವಸ ಸ್ವಿಫ್ಟ್ ಡಿಸೈರ್ ಕಾರ್ ನಂ. ಕೆಎ-20/ಎನ್-7823 ಹೋಂಡೈ ಕಾರು ಮತ್ತು ಆಟೋಗಳ ದಾಖಲಾತಿಗಳನ್ನು ನೀಡುವಂತೆ ಸಾರಿಗೆ ಇಲಾಖೆಯವರಿಗೆ ಮನವಿ ಪತ್ರ ನೀಡಿರುತ್ತೇನೆ. ಸಾಕ್ಷಿ ಸದರಿ ಮನವಿ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-155 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-155(ಎ) ಎಂದು ಗುರುತಿಸಲಾಯಿತು.

ದಿನಾಂಕ:22.08.2021 ರಂದು ಎ-2 ಆರೋಪಿ ಸೌರಪ್ಪ ರವರ ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ತಹಶೀಲ್ದಾರ್, ಆಲುರು ತಾಲ್ಲೂಕು, ಕರ್ನೂಲು ಜಿಲ್ಲೆ, ಆಂಧ್ರಪ್ರದೇಶ ರವರಿಗೆ ಮನವಿ ಸಲ್ಲಿಸಲಾಯಿತು. ಅದರಂತೆ ದಿನಾಂಕ; 28.08.2021 ರಂದು ಆರೋಪಿ-2 ಸೌರಪ್ಪ ರವರ ಜಾತಿ ಪ್ರಮಾಣ ಪತ್ರವನ್ನು ಸ್ವೀಕರಿಸಿರುತ್ತೇನೆ. ಪರಿಶೀಲಿಸಲಾಗಿ ಸದರಿ ಆರೋಪಿತನು ಬೆಸ್ತ ಬಿಸಿ-ಎ ಜಾತಿಗೆ ಸೇರಿದವರೆಂದು ನಮೂದು ಮಾಡಿರುತ್ತಾರೆ. ಸಾಕ್ಷಿಯು ಸದರಿ ಜಾತಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-156 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-156(ಎ) ಎಂದು ಗುರುತಿಸಲಾಯಿತು. ಮನವಿ ಪತ್ರವನ್ನು ನಿಪಿ-157 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-157(ಎ) ಎಂದು ಗುರುತಿಸಲಾಯಿತು.

ದಿನಾಂಕ:23.08.2021 ರಂದು ಜಪ್ತು ಪಡಿಸಿದ ಮೋಟಾರ್ ವಾಹನಗಳ ಬಿ ಎಕ್ಸ್ಟ್ರಾಕ್ಟ್ ನೀಡುವಂತೆ ಕೋರಿದ ಮೇರೆಗೆ ಸಾರಿಗೆ ಇಲಾಖೆಯವರು ಕೆ.ಎ.-18 ಪಿ 1523 ಮತ್ತು ಕೆ.ಎ.34 ಎ 2654 ವಾಹನಗಳ ಬಿ.ಎಕ್ಸ್‌ಟ್ರ್ಯಾಕ್ಟ್ ನೀಡಿದ್ದು ಪಡೆದು ಪರಿಶೀಲಿಸಿರುತ್ತೇನೆ. ಕಾರಿನ ನಂ.ಕೆಎ-18/ಪಿ-1523 ಮತ್ತು ಬಜಾಜ್ ಆಟೋ ನಂ. ಕೆಎ-34/ಎ-2957 ರ ಬಿ.ಎಕ್ಸ್‌ಟ್ರ್ಯಾಕ್ಟ್

-3-

ನೀಡಿದಂತೆ ಬಿ.ಎಕ್ಸ್‌ಟ್ರ್ಯಾಕ್ಟ್ ಸ್ವೀಕರಿಸಿರುತ್ತೇನೆ. ಕೃತ್ಯ ನಡೆದ ಸ್ಥಳದ ಉತಾರೆಯನ್ನು ನೀಡುವಂತೆ ಕಾರ್ಯದರ್ಶಿ, ಕೊಂಚಿಗೇರಿ ಗ್ರಾಮ ಪಂಚಾಯಿತಿ, ಸಿರುಗುಪ್ಪ ತಾಲ್ಲೂಕು ರವರಿಗೆ, ಮನವಿ ಸಲ್ಲಿಸಲಾಯಿತು. ಸಾಕ್ಷಿ ಸದರಿ ಬಿ ಎಕ್ಸ್ಟ್ರಾಕ್ಟ್ ವರದಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-158 ಮತ್ತು ನಿಪಿ-159 ಎಂದು ಹಾಗೂ ಸಾಕ್ಷಿಯ ಸಹಿಗಳನ್ನು ನಿಪಿ-158(ಎ) ಮತ್ತು ನಿಪಿ-159(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಗ್ರಾಮ ಪಂಚಾಯಿತಿಯವರಿಗೆ ನೀಡಿದ ಮನವಿ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ-160 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-160(ಎ) ಎಂದು ಗುರುತಿಸಲಾಯಿತು.

ಸಹಾಯಕ ಕಾರ್ಯಪಾಲಕ ಅಭಿಯಂತರರು ಪಿ.ಡಬ್ಲ್ಯೂ.ಡಿ. ಕೋಟೆ ಬಳ್ಳಾರಿ ಮತ್ತು ಸಹಾಯಕ ಕಾರ್ಯಪಾಲಕ ಅಭಿಯಂತರರು ಪಿ.ಡಬ್ಲ್ಯೂ.ಡಿ. ಇಲಾಖೆ ಶಿರಗುಪ್ಪ ರವರಿಗೆ ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಲು ಮನವಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಸದರಿ ವನವಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-161 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-161(ಎ) ಎಂದು ಗುರುತಿಸಲಾಯಿತು. ಪ್ರಕರಣದಲ್ಲಿ ಮೃತರ ಶವಗಳನ್ನು ಹಿಂದಿನ ತನಿಖಾಧಿಕಾರಿಗಳು ಹಾಗೂ ಪ್ರಸ್ತುತ ತನಿಖೆಯಲ್ಲಿ ಎಲ್ಲಾ ಪ್ರಯತ್ನ ಮಾಡಿದ್ಯಾಗ್ಯೂ ಶವಗಳು ಪತ್ತೆಯಾಗಿರುವುದಿಲ್ಲ. ಕಾರಣದಿನಾಂಕ:31.08.2021 ರಂದು ಎ1 ರಿಂದ ಎ4 ರವರ ವಿರುದ್ಧ ಆರೋಪ ದೃಢಪಟ್ಟಿದ್ದರಿಂದ ಕಲಂ 3(2),(ತ-ಚಿ) ಎಸ್‌ಸಿ/ಎಸ್‌ಟಿ ಕಾಯಿದೆ ಮತ್ತು ಕಲಂ 201, 364, 302, 120ಬಿ, 394 ,ಸಹವಾಚಕ 34 ಭಾದಂಸಂ

ರೀತ್ಯಾ ಘನ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿಕೊಂಡಿರುತ್ತೇನೆ. ಸಾಕ್ಷಿಯು ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ</u>**

ನಾನು 2 ನೇ ಆರೋಪಿಯ ಜಾತಿ ಪ್ರಮಾಣಪತ್ರ ಕೋರಿ ಮನವಿ ಪತ್ರ ಸಲ್ಲಿಸಿದ್ದೆ ಎಂದು ಮತ್ತು ಅವರು ವರದಿ ನೀಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾಹನದ ಬಿ ಎಕ್ಸ್ಟ್ರ್ಯಾಕ್ಟ್ ಕೋರಿ ಮನವಿ ಪತ್ರ ಸಲ್ಲಿಸಿದ್ದೆ ಎಂದು ಮತ್ತು ಬಿ ಎಕ್ಸ್ಟ್ರ್ಯಾಕ್ಟ್ ಪಡೆದು ಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೃತ್ಯ ಸ್ಥಳ ಉತಾರೆ ನೀಡುವಂತೆ ಮನವಿ ಪತ್ರ ಸಲ್ಲಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ದಾಖಲಾತಿಗಳನ್ನು ಈ ಪ್ರಕರಣಕ್ಕೋಸ್ಕರ ಸುಳ್ಳು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ. ಹೇ. ಕೆ. ಸರಿ ಇದೆ.

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**